# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು – 572 103.

**ದಿನಾಂಕ: 21.07.2023 ರಂದು ಮಧ್ಯಾಹ್ನ: 3.00 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿ, ವಿಶ್ವವಿದ್ಯಾನಿಲಯದ ಆವರಣ ಬಿ.ಹೆಚ್.ರಸ್ತೆ, ತುಮಕೂರು–572103 ಇಲ್ಲಿ ನಡೆದ 2022–23ನೇ ಸಾಲಿನ ಐದನೇ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರುಗಳು**

| | | |
|---|---|---|
| 1. | **ಪ್ರೊ. ವೆಂಕಟೇಶ್ವರಲು ಎಂ, ಮಾನ್ಯ ಕುಲಪತಿಗಳು** | **ಅಧ್ಯಕ್ಷರು** |
| 2. | **ಡಾ. ಶಿವಲಿಂಗಸ್ವಾಮಿ ಹೆಚ್.ಕೆ., ಹಿರಿಯ ಡೀನರು,**<br>ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 3. | **ಡಾ. ಕೆ ರಾಜೀವಲೋಚನ**<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ–577501. | **ಸದಸ್ಯರು** |
| 4. | **ಶ್ರೀ ಕೆ.ಆರ್ ದೇವರಾಜ್**<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 129 | **ಸದಸ್ಯರು** |
| 5. | **ಡಾ. ರಂಗಪ್ಪ ಎಸ್.ಟಿ.**<br>ಪ್ರಾಂಶುಪಾಲರು, ಸರ್ಕಾರಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಶಿರಾ ತುಮಕೂರು ಜಿಲ್ಲೆ–572137. | **ಸದಸ್ಯರು** |
| 6. | **ಡಾ. ಹೆಚ್.ಪಿ. ವೀರಭದ್ರಸ್ವಾಮಿ,**<br>ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು–572101. | **ಸದಸ್ಯರು** |
| 7. | **ಡಾ. ಪ್ರಸನ್ನ, ಪ್ರಾಂಶುಪಾಲರು,**<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | **ಸದಸ್ಯರು** |
| 8. | **ಶ್ರೀಮತಿ ವಸಂತ ಟಿ.ಡಿ.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಿ.ಹೆಚ್. ರಸ್ತೆ, ತುಮಕೂರು ಜಿಲ್ಲೆ–572101. | **ಸದಸ್ಯರು** |
| 9. | **ಕುಲಸಚಿವರು** (ಪರೀಕ್ಷಾಂಗ) | **ಸದಸ್ಯರು** |
| 10. | **ಕುಲಸಚಿವರು** | **ಸದಸ್ಯ ಕಾರ್ಯದರ್ಶಿ** |

**ಹಾಜರಾಗದ ಸದಸ್ಯರು**

| | | |
|---|---|---|
| 11. | **ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಅಥವಾ**<br>ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, **ಬೆಂಗಳೂರು** | **ಸದಸ್ಯರು** |
| 12. | **ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |
| 13. | **ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |
| 14. | **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |
| 15. | **ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ: 21.07.2023ರ ಶುಕ್ರವಾರ ಮಧ್ಯಾಹ್ನ: 3:00 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿ, ವಿಶ್ವವಿದ್ಯಾನಿಲಯದ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103 ಇಲ್ಲಿ ನಡೆದ 2022-23ನೇ ಸಾಲಿನ ಐದನೇ ವಿಶೇಷ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು, ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು.

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | **ಸಿಂಡಿಕೇಟ್ ವಿಭಾಗ** | |
| 1. | 2022-23.ವಿ.ಸಿಂ-05 ಸಿಂ.ವಿ.01 | ತುಮಕೂರು ವಿಶ್ವವಿದ್ಯಾನಿಲಯದ ಹದಿನಾರನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡುವ ಸಂಬಂಧ ಅಭ್ಯರ್ಥಿಗಳ ಪಟ್ಟಿಯನ್ನು ಶಿಫಾರಸ್ಸು ಮಾಡುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಹದಿನಾರನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡುವ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ಪಟ್ಟಿಯನ್ನು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಗೆ ವಿವರಿಸಿದರು. ಗೌರವ ಡಾಕ್ಟರೇಟ್‌ಗಾಗಿ ಸ್ವೀಕೃತವಾದ ಅರ್ಜಿಗಳ ಪಟ್ಟಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಆರು ಗಣ್ಯರ ಹೆಸರುಗಳನ್ನು ಅಂತಿಮಗೊಳಿಸಿ ತಜ್ಞರ ಪರಿಶೀಲನಾ ಸಮಿತಿಗೆ ಸದರಿ ಪಟ್ಟಿಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಶಿಫಾರಸ್ಸು ಮಾಡಿತು. |
| | | **ಪರೀಕ್ಷಾಂಗ ವಿಭಾಗ** | |
| 2. | 2022-23.ವಿ.ಸಿಂ-05 ಪ.ವಿ-01 | Mr. Samartha Raghava Nagabhushanam ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು. | Mr. Samartha Raghava Nagabhushanam ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ನೀಡುವ ಬಗ್ಗೆ ಚರ್ಚಿಸಿದ ಸಭೆಯು ಈ ಕುರಿತು ಡಿ.ಲಿಟ್ ಪದವಿ ಘೋಷಿಸಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| | | **ಪಿ.ಹೆಚ್.ಡಿ. ವಿಭಾಗ** | |
| 3. | 2022-23.ವಿ.ಸಿಂ-03 ಪಿಹೆಚ್.ಡಿ. ವಿ-01 | 2015-16ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ. ಸಂಶೋಧನೆಯ ಅವಧಿ ವಿಸ್ತರಿಸುವ ಕುರಿತು. | 2015-16ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ. ಸಂಶೋಧನೆಯ ಕಾಲಾವಧಿಯನ್ನು ವಿಸ್ತರಿಸುವ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಿದ ಸಭೆಯು, ವಿವಿಧ ವಿಭಾಗಗಳ ಒಟ್ಟು 15 |

| | | | |
|---|---|---|---|
| | | | ಸಂಶೋಧನಾರ್ಥಿಗಳಲ್ಲಿ 13 ಪಿಹೆಚ್.ಡಿ. ಸಂಶೋಧನಾರ್ಥಿಗಳು, ತಮ್ಮ ಸಂಶೋಧನಾ ಕಾರ್ಯವನ್ನು ಮುಂದುವರೆಸಲು, ಡಾಕ್ಟರಲ್ ಕಮಿಟಿಗಳ ಶಿಫಾರಸ್ಸಿನನ್ವಯ ಪಿಹೆಚ್.ಡಿ. ಸಂಶೋಧನಾರ್ಥಿಗಳ ಅವಧಿಯನ್ನು ಪೂರ್ಣಗೊಳಿಸಲು ಇರುವ ಕಾಲಾವಕಾಶದ ಕೊನೆಯ ದಿನಾಂಕದಿಂದ ಮಾಹೆಯಾನ ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ದಂಡಶುಲ್ಕದೊಂದಿಗೆ ಡಾಕ್ಟರಲ್ ಕಮಿಟಿ ಮತ್ತು ಮಾರ್ಗದರ್ಶಕರ ಶಿಫಾರಸ್ಸಿನನ್ವಯ ಹೆಚ್ಚುವರಿಯಾಗಿ ಕಾಲಾವಧಿಯನ್ನು ವಿಸ್ತರಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.<br>ಉಳಿದ ಇಂಗ್ಲೀಷ್ ಮತ್ತು ಸಮಾಜಶಾಸ್ತ್ರ ವಿಭಾಗಗಳ 02 ಸಂಶೋಧನಾರ್ಥಿಗಳ ಹೆಚ್ಚುವರಿ ಕಾಲಾವಧಿಯನ್ನು ವಿಸ್ತರಿಸುವ ಕುರಿತು ಡಾಕ್ಟರಲ್ ಕಮಿಟಿಗಳ ಶಿಫಾರಸ್ಸಿನಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ತೀರ್ಮಾನಿಸಿತು. |
| | | **ಅಭಿವೃದ್ಧಿ ವಿಭಾಗ** | |
| 4. | 2022-23.ವಿ.ಸಿಂ-05 ಅಭಿವೃದ್ಧಿ ವಿಭಾಗ-01 | ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರವೀಣ್‌ಕುಮಾರ್ ಟಿ., (ತಾತ್ಕಾಲಿಕ) ಇವರ ಸೇವೆಯನ್ನು ಮುಂದುವರೆಸಿರುವ ಕ್ರಮದ ಸ್ಥಿರೀಕರಣದ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಶ್ರೀ ಪ್ರವೀಣ್ ಕುಮಾರ್ ಟಿ ಇವರ ಸೇವೆಯನ್ನು ದಿನಾಂಕ 14.06.2023 ರಿಂದ ಪೂರ್ವಾನ್ವಯವಾಗುವಂತೆ, ಮುಂದಿನ ಹನ್ನೊಂದು ತಿಂಗಳಿಗೆ ಅಥವಾ ಮುಂದಿನ ಆದೇಶದವರೆಗೆ ಮಾಹೆಯಾನ ರೂ. 32,000/- (ಮೂವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸುವ ಸಂಬಂಧ ದಿನಾಂಕ 11.07.2023ರಂದು ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 5. | 2022-23.ವಿ.ಸಿಂ-05 ಅಭಿವೃದ್ಧಿ ವಿಭಾಗ-02 | ತುಮಕೂರು ವಿಶ್ವವಿದ್ಯಾನಿಲಯವು, ತುಮಕೂರು ಸ್ಮಾರ್ಟ್‌ಸಿಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಸ್ಥಿರೀಕರಣದ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯವು ದಿನಾಂಕ:27.06.2023 ರಂದು ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ಕ್ರಮವನ್ನು ಅನುಮೋದಿಸಿ, ಸಭೆಯು ಸ್ಥಿರೀಕರಿಸಿತು. |

| | | | |
|---|---|---|---|
| 6. | 2022-23.ವಿ.ಸಿಂ-05 ಅಭಿವೃದ್ಧಿ ವಿಭಾಗ-03 | ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ಸಲಹೆಗಾರರನ್ನು ನೇಮಿಸುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ದಿನಾಂಕ 10.03.2023ರ ಸಿಂಡಿಕೇಟ್ ಸಭಾ ನಿರ್ಣಯದಂತೆ, ಇನ್‌ಕ್ಯುಬೇಷನ್ ಸೆಂಟರ್ ಅನ್ನು ನಿರ್ವಹಿಸಲು ಇಂಡಸ್ಟ್ರಿ ಹಿನ್ನಲೆಯುಳ್ಳ ಒಬ್ಬರನ್ನು ನೇಮಿಸಲು ನಿರ್ಣಯವಾಗಿರುವ ಹಿನ್ನಲೆಯಲ್ಲಿ ಕೈಗಾರಿಕೋದ್ಯಮದಲ್ಲಿ ಹೆಚ್ಚು ಅನುಭವ ಹೊಂದಿರುವ ಡಾ. ಶಾರದ ಎಚ್.ಎಸ್. ಇವರನ್ನು ಮಾಹೆಯಾನ ರೂ.25,000/- (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳ ಗೌರವ ಸಂಭಾವನೆಯೊಂದಿಗೆ ವಿಶ್ವವಿದ್ಯಾನಿಲಯದ ಷರತ್ತು ಮತ್ತು ನಿಬಂದನೆಗಳೊಳಪಟ್ಟು ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ತಾತ್ಕಾಲಿಕವಾಗಿ ಸಲಹೆಗಾರರನ್ನಾಗಿ ನೇಮಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. |
| | | **ಕ್ರೀಡಾ ವಿಭಾಗ** | |
| 7. | 2022-23.ವಿ.ಸಿಂ-05 ಕ್ರೀಡಾ ವಿಭಾಗ-01 | ದಿನಾಂಕ 04.07.2023 ರಂದು ನಡೆದ ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ 2022-23ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭಾ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ 2022-23ನೇ ಸಾಲಿನ ಕ್ರೀಡಾ ಸಲಹಾ ಸಮಿತಿಯ ಸಭಾ ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಿತು. |
| | | **ಶೈಕ್ಷಣಿಕ ವಿಭಾಗ** | |
| 8. | 2022-23.ವಿ.ಸಿಂ-05 ಶೈ.ವಿಭಾಗ-01 | ತುಮಕೂರು ವಿಶ್ವವಿದ್ಯಾನಿಲಯವು JD INSTITUTE OF FASHION TECHNOLOGY ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಶಿಕ್ಷಣ ಅಭಿವೃದ್ಧಿ, ತರಬೇತಿ, ತಂತ್ರಜ್ಞಾನದ ವರ್ಗಾವಣೆ ಮತ್ತು ದೀರ್ಘಾವಧಿಯ ವಾಣಿಜ್ಯೇತರ ಆಧಾರದ ಮೇಲೆ ಜ್ಞಾನವು ಹೆಚ್ಚೆಗೆಯಾಗುವುದರಿಂದ ತುಮಕೂರು ವಿಶ್ವವಿದ್ಯಾನಿಲಯವು **JD INSTITUTE OF FASHION TECHNOLOGY** ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. ಮುಂದುವರೆದು, ಸದರಿ ಒಡಂಬಡಿಕೆ ಬಗ್ಗೆ ಮುಂದಿನ ಕ್ರಮವನ್ನು ಕೈಗೊಳ್ಳುವ ಸಂಬಂಧ ಸಿಂಡಿಕೇಟ್ ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನುನೀಡಲು ಸರ್ವಾನುಮತದಿಂದ ತೀರ್ಮಾನಿಸಿತು. |

<table>
<tr><td colspan="4">ಸಿಬ್ಬಂದಿ ವಿಭಾಗ</td></tr>
<tr><td>9.</td><td>2022–23.ವಿ.ಸಿಂ–05<br>ಸಿಬ್ಬಂದಿ ವಿಭಾಗ–01</td><td>ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ ಇಲ್ಲಿ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡ ಡಾ. ರಮೇಶ್ ಎಸ್., ಸಹಾಯಕ ಪ್ರಾಧ್ಯಾಪಕರು, ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಸ್ಥಿರೀಕರಿಸುವ ಕುರಿತು.</td><td>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ ಇಲ್ಲಿ "Centre for Economic Studies and Planning, School of Social Sciences" ಇಲ್ಲಿ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡ ಡಾ.ರಮೇಶ್ ಎಸ್., ಸಹಾಯಕ ಪ್ರಾಧ್ಯಾಪಕರು, ಇವರನ್ನು ಒಂದು ವರ್ಷದ ಅವಧಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಧಾರಣಾಧಿಕಾರ (Lien) ಸೌಲಭ್ಯ ನೀಡಿ, ದಿನಾಂಕ:13.07.2023ರ ಅಪರಾಹ್ನ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.</td></tr>
<tr><td colspan="4">ಹೆಚ್ಚುವರಿ ಕಾರ್ಯಸೂಚಿಗಳು</td></tr>
<tr><td colspan="4">ಸಿಬ್ಬಂದಿ ವಿಭಾಗ</td></tr>
<tr><td>10.</td><td>2022–23.ವಿ.ಸಿಂ–05<br>ಸಿಬ್ಬಂದಿ ವಿಭಾಗ–02</td><td>ಅಧ್ಯಕ್ಷರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ ಇವರು ತಮ್ಮ ವಿಭಾಗದಲ್ಲಿ ಕಾರ್ಯಭಾರದ ವಿವರಗಳನ್ನು ಸಲ್ಲಿಸುವಲ್ಲಿ ವಿಶ್ವವಿದ್ಯಾನಿಲಯಕ್ಕೆ ದ್ವಂದ್ವ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು.</td><td>ಅಧ್ಯಕ್ಷರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ ಇವರು ತಮ್ಮ ವಿಭಾಗದಲ್ಲಿ ಕಾರ್ಯಭಾರದ ವಿವರಗಳನ್ನು ಸಲ್ಲಿಸುವಲ್ಲಿ ವಿಶ್ವವಿದ್ಯಾನಿಲಯಕ್ಕೆ ದ್ವಂದ್ವ ಮಾಹಿತಿಗಳನ್ನು ಸಲ್ಲಿಸಿರುವ ಸವಿವರಗಳನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.<br>ಈ ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ಸಭೆಯು ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದಲ್ಲಿ ಉಂಟಾಗಿರುವ ದ್ವಂದ್ವ ನಿಲುವುಗಳಿಗೆ ಸಂಬಂಧಿಸಿದಂತೆ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.<br>ಮುಂದುವರೆದು, ಪ್ರಸ್ತುತ ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ನಾಗಭೂಷಣ, ಸಹಾಯಕ ಪ್ರಾಧ್ಯಾಪಕರು</td></tr>
</table>

| | | | |
|---|---|---|---|
| | | | ಹಾಗೂ ಡಾ. ಶ್ರೀಪಾದ ಭಟ್, ಸಹಾಯಕ ಪ್ರಾಧ್ಯಾಪಕರು, ಇವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಕ್ರಮವಾಗಿ ಅವರುಗಳ ಮೂಲಸ್ಥಾನವಾದ ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿಗೆ ಹಿಂದಿರುಗಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| **ಇಂಜಿನಿಯರಿಂಗ್ ವಿಭಾಗ** | | | |
| 11. | 2022-23.ವಿ.ಸಿಂ-05 ಇಂ. ವಿಭಾಗ-01 | ತುಮಕೂರು ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯ ಕಟ್ಟಡದ ದುರಸ್ಥಿ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ತುಮಕೂರು ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯ ಕಟ್ಟಡದ ದುರಸ್ಥಿಯ ಸಂಬಂಧ ಮೆ. ಶ್ರೀ ಟೆಕ್ ಸಪೋರ್ಟ್ಸ್, ತುಮಕೂರು ರವರು ಸಲ್ಲಿಸಿರುವ 27 ಪುಟಗಳುಳ್ಳ ವರದಿಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು ಉಪ ವಿಭಾಗ, ತುಮಕೂರು ಇವರಿಂದ ಸದರಿ ವರದಿಯನ್ನು ತಾಂತ್ರಿಕವಾಗಿ ದೃಢೀಕರಿಸಿ ಸಲ್ಲಿಸಿರುವ ಕಟ್ಟಡ ಸುರಕ್ಷತಾ ಫಲಿತಾಂಶದ ವರದಿಯನ್ನು ಆಧಾರಿಸಿ, ವಿಶ್ವವಿದ್ಯಾನಿಲಯದ ಸ್ನಾತಕ ಮಹಿಳೆಯರ ವಿದ್ಯಾರ್ಥಿನಿಲಯದ ಕಟ್ಟಡದಲ್ಲಿ ದುರಸ್ಥಿಯಲ್ಲಿರುವ ಭಾಗಗಳಾದ ಊಟದ ಕೊಠಡಿ ಮತ್ತು ಶೌಚಾಲಯಗಳನ್ನು ನೆಲಸಮ ಮಾಡಿ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 12. | 2022-23.ವಿ.ಸಿಂ-05 ಇಂ. ವಿಭಾಗ-02 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ನೀಡುತ್ತಿರುವ ಮೆ. ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ., ಬೆಂಗಳೂರು ರವರ ಸೇವೆಯ ಕುರಿತು. | ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಿದ ಮಾನ್ಯ ಕುಲಸಚಿವರು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ನೀಡುತ್ತಿರುವ ಮೆ॥ ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ., ಬೆಂಗಳೂರು ರವರ ಸೇವೆಯಲ್ಲಿ ಇದುವರೆಗೂ ಹಲವಾರು ಸೇವಾ ಷರತ್ತುಗಳನ್ನು ಉಲ್ಲಂಘಿಸಿರುವ ಬಗ್ಗೆ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. |

| | | | |
|---|---|---|---|
| | | | ಈ ವಿಷಯವಾಗಿ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಕೆ.ಆರ್. ದೇವರಾಜ್, ರವರು ಸದರಿ ಭದ್ರತಾ ಏಜೆನ್ಸಿಯವರಿಗೆ ಮತ್ತೊಂದು ಅವಕಾಶವನ್ನು ನೀಡಲು ಸಭೆಗೆ ತಿಳಿಸಿದರು.<br><br>ಈ ವಿಷಯವಾಗಿ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಮೆ॥ ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ.ಲಿ., ಬೆಂಗಳೂರು ಇವರೊಂದಿಗೆ ಸಭೆಯನ್ನು ನಡೆಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಮತ್ತು ಖರೀದಿ ವಿಭಾಗ** | | | |
| 13. | 2022-23.ವಿ.ಸಿಂ-05<br>ಅಭಿವೃದ್ಧಿ ವಿಭಾಗ-04 | ಕುಮಾರವ್ಯಾಸ ಭಾರತ ಎಂಬ ಕರ್ಣಾಟಕ ಭಾರತ ಕಥಾ ಮಂಜರಿ ಕೃತಿಯ ಎರಡು ಸಂಪುಟಗಳ ವಿಲೇವಾರಿ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಕುಮಾರವ್ಯಾಸ ಅಧ್ಯಯನ ಪೀಠ ಮತ್ತು ಕನ್ನಡ ಗಣಕ ಪರಿಷತ್, ಬೆಂಗಳೂರು ಇವರ ಸಹಯೋಗದೊಂದಿಗೆ ಪ್ರಕಟಿಸಿರುವ ಕುಮಾರವ್ಯಾಸ ಭಾರತ ಎಂಬ ಕರ್ಣಾಟಕ ಭಾರತ ಕಥಾ ಮಂಜರಿ ಕೃತಿಯ ಎರಡು ಸಂಪುಟಗಳು ಒಳಗೊಂಡಂತೆ ಒಂದು ಕೃತಿಯ ಬೆಲೆ ರೂ.2,000/- ಗಳಾಗಿದ್ದು, ಸದರಿ ಕೃತಿಯ ಒಂದು ಪ್ರತಿಯನ್ನು (02 ಸಂಪುಟಗಳು) ಈ ಹಿಂದೆ ಶೇಕಡ 25% ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದ್ದ ಪ್ರತಿಗಳನ್ನು, ಪ್ರಸ್ತುತ ಶೇಕಡ 50% ರಿಯಾಯಿತಿ ದರದಂತೆ ಪ್ರತಿಗಳನ್ನು ಮಾರಾಟ ಮಾಡಲು ವಿಶ್ವವಿದ್ಯಾನಿಲಯದಲ್ಲಿ ದಾಸ್ತಾನು ತೆಗೆದುಕೊಳ್ಳುವಂತೆ ಹಾಗೂ ಲಭ್ಯವಿರುವ ದಾಸ್ತಾನಿಗನುಗುಣವಾಗಿ ವಿಲೇವಾರಿ ಮಾಡುವ ಸಂದರ್ಭದಲ್ಲಿ ಒಬ್ಬ ವ್ಯಕ್ತಿಗೆ ಒಂದು ಪ್ರತಿಯನ್ನು ಮತ್ತು ಒಂದು ಕಾಲೇಜಿಗೆ ಎರಡು ಪ್ರತಿಗಳಂತೆ ಆಧಾರ್ ಕಾರ್ಡ್ ಅಥವಾ ಗುರುತಿನ ಚೀಟಿಯನ್ನು ತೆಗೆದುಕೊಂಡು ಸದರಿ ಕೃತಿಯನ್ನು ವಿಲೇವಾರಿ ಮಾಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮತಿಸಿತು. |

## ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು

ತುಮಕೂರು ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಡೀನರುಗಳಿಗೆ ಸಂಬಂಧಿಸಿದಂತೆ, ಆಯಾ ನಿಕಾಯಗಳಿಗೆ ಅನ್ವಯಿಸುವ ವಿಭಾಗಗಳ ಕಾರ್ಯವೈಖರಿ ಮತ್ತು ದೈನಂದಿನ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ನೀಡಲು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಗೆ ಪ್ರಸ್ತಾಪಿಸಿದರು, ಈ ಸಂಬಂಧ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಅನುಮೋದಿಸಿದರು.

| | | | |
|---|---|---|---|
| ಕುಲಸಚಿವರು (ಪರೀಕ್ಷಾಂಗ) | [signature] | ಪ್ರೊ. ಹೆಚ್.ಕೆ. ಶಿವಲಿಂಗಸ್ವಾಮಿ | [signature] |
| ಡಾ. ಕೆ ರಾಜೀವಲೋಚನ | | ಡಾ. ಪ್ರಸನ್ನ | [signature] |
| ಶ್ರೀ ಕೆ.ಆರ್ ದೇವರಾಜ್ | | ಶ್ರೀಮತಿ ವಸಂತ ಟಿ.ಡಿ. | [signature] |
| ಡಾ. ರಂಗಪ್ಪ ಎಸ್.ಟಿ. | | ಡಾ. ಹೆಚ್.ಪಿ. ವೀರಭದ್ರಸ್ವಾಮಿ | [signature] |

[signature]
ಮಾನ್ಯ ಕುಲಸಚಿವರು

[signature]
ಮಾನ್ಯ ಕುಲಪತಿಗಳು